**ದಿನಾಂಕಃ 14.08.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 5 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ**

ನಾನು ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ವ್ಯವಸಾಯ ಮಾಡುತ್ತೇನೆಂದು ಬರೆಸಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಕೂಲಿ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. 1(ಎ) ರಿಂದ (ಸಿ) ಮತ್ತು 2ನೇ ವಾದಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿರುತ್ತಾರೆ ಎಂದರೆ ಸರಿಯಲ್ಲ. ಅವರು ಹಿಂದೂ ಧರ್ಮದವರಾಗಿರುತ್ತಾರೆ. ವಾದಿಗಳ ತಂದೆ ಚಾಮಯ್ಯ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದು ಕ್ರಿಶ್ಚಿಯನ್ ಧರ್ಮದಂತೆ ನಡೆಯುತ್ತಿದ್ದರು ಎಂದರೆ ಸರಿಯಲ್ಲ. ಪ್ಯಾರಿಸ್ ಕ್ರೈಸ್ಟ್ ಚರ್ಚಿನಲ್ಲಿ ಚಾಮಯ್ಯರವರು ಸದಸ್ಯರಾಗಿದ್ದರು ಎಂದರೆ ಸರಿಯಲ್ಲ. ಚಾಮಯ್ಯರವರಿಗೆ 5 ಜನ ಮಕ್ಕಳು. ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು. ಚಾಮಯ್ಯರವರ ಮಕ್ಕಳು ಜಯರಾಜು, ಸುಂದರರಾಜು ಮತ್ತು ರಾಜು. ಹೆಣ್ಣುಮಕ್ಕಳ ಹೆಸರು ಗೊತ್ತಿಲ್ಲ. ಚಾಮಯ್ಯರವರು ಮೃತಪಟ್ಟಿದ್ದಾರೆ ದಿನಾಂಕ ನನಗೆ ಗೊತ್ತಿಲ್ಲ. ಅವರ ಹೆಂಡತಿಯ ಹೆಸರು ಗೊತ್ತಿಲ್ಲ. ಚಾಮಯ್ಯರವರ ಹೆಂಡತಿ ಮೈಸೂರಿನಲ್ಲಿದ್ದಾರೆ. ಚಾಮಯ್ಯ ಮತ್ತು ಅವರ ಹೆಂಡತಿ ರಾಜಮ್ಮರವರಿಗೆ ಒಟ್ಟು 8 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಚಾಮಯ್ಯರವರಿಗೆ ಸೇರಿದ ಆಸ್ತಿಗಳ ಸರ್ವೆ ನಂಬರು ನನಗೆ ಗೊತ್ತಿಲ್ಲ. ಚಾಮಯ್ಯರವರು ಅವರ ಜೀವಿತ ಕಾಲದಲ್ಲಿ ಯಾವ ಯಾವ ಆಸ್ತಿಯನ್ನು ಯಾವ ಯಾವ ದಾಖಲೆ ಮಾಡಿ ಯಾರು ಯಾರಿಗೆ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಜಯರಾಜು ಮತ್ತು ಸುಂದರರಾಜು ಮತ್ತು 1ನೇ ಪ್ರತಿವಾದಿ ಬೇರೆ ಬೇರೆ ವಾಸವಾಗಿದ್ದಾರೆಂದರೆ ಸರಿ. ಚಾಮಯ್ಯರವರ ಹೆಣ್ಣುಮಕ್ಕಳು ಮದುವೆಯಾಗಿ ಬೇರೆ ಬೇರೆ ವಾಸವಿದ್ದಾರೆಂದರೆ ಸರಿ. ವಾದಿಗಳು ಏನು ಪರಿಹಾರ ಕೇಳಿ ಯಾವ ಆಸ್ತಿಯ ಮೇಲೆ ಕೇಸು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. 2ನೇ ವಾದಿಯ ಹೇಳಿಕೆಯ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಅದನ್ನು ಹೊರತು ಪಡಿಸಿ ನನಗೆ ವೈಯಕ್ತಿಕವಾಗಿ ಈ ಕೇಸಿನ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.

**ದಿನಾಂಕಃ 14.08.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 5 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ**

ನಾನು 4ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಏನು ಉದ್ಯೋಗ ಮಾಡುತ್ತೇನೆಂದು ಬರೆಸಿಲ್ಲ. ನನಗೆ ಓದಲು ಬರೆಯಲು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾರ ಮೇಲೆ ಕೇಸು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. 2ನೇ ವಾದಿಯ ಹೇಳಿಕೆಯ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಅದನ್ನು ಹೊರತು ಪಡಿಸಿ ನನಗೆ ವೈಯಕ್ತಿಕವಾಗಿ ಈ ಕೇಸಿನ ಬಗ್ಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ. ಕೊಳ್ಳೇಗಾಲ.